# ಭಾಷೆ ಯಾವುದಾದರೇನು?



ದಕ್ಷಿಣದ ಬಹುತೇಕ ನಟಿಯರ ಮಾತು 'ಕಲೆಗೆ ಭಾಷೆಯ ಗಡಿಯಿಲ್ಲ'. ಅವಕಾಶಗಳನ್ನು ಅರಸುವಾಗ ಭಾಷೆಯ ಗಡಿ ಹಾಕಿಕೊಳ್ಳುವ ನಟಿಯರು ತೀರಾ ವಿರಳ. ಬಾಲಿವುಡ್‌ನ ನಟಿಯರಲ್ಲಿ ಈ ಧೋರಣೆ ಕಡಿಮೆ. ಹೆಚ್ಚೆಂದರೆ ಹಾಲಿವುಡ್‌ನತ್ತ ಅವರ ಕಣ್ಣು ನೆಟ್ಟಿರುತ್ತದೆ. ಅಲ್ಲಿಂದ ದಕ್ಷಿಣದ ದಿಕ್ಕಿಗೆ ಬಂದು ಹೋಗುವವರೂ ಅಪರೂಪ. ಆದರೆ, 'ನೀರಜಾ' ಖ್ಯಾತಿಯ ಸೋನಂ ಕಪೂರ್ ಈ ನಿಯಮಗಳನ್ನು ಹಾಕಿಕೊಂಡಿಲ್ಲವಂತೆ. ಯಾವುದೇ ಕಲಾವಿದನ ಉತ್ಸಾಹ, ತುಡಿತದ ಮುಂದೆ ಯಾವುದೇ ಭಾಷೆಯ ಸಿನಿಮಾ ಸವಾಲೇ ಅಲ್ಲ ಎನ್ನುವುದು ಆಕೆಯ ಅಭಿಪ್ರಾಯ. ಹಿಂದಿಯಲ್ಲದೆ, ಪಂಜಾಬಿ, ಮರಾಠಿ, ರಷ್ಯನ್, ಚೈನೀಸ್, ಫ್ರೆಂಚ್ ಅಥವಾ ಯಾವ ಭಾಷೆಯದ್ದಾದರೂ ಕಥೆ ಚೆನ್ನಾಗಿದ್ದರೆ ನಟಿಸಲು ತಾನು ಸಿದ್ಧ ಎಂದಿದ್ದಾಳೆ ಸೋನಂ.

'ಚೌತಿ ಕೂಟ್' ಎಂಬ ಪಂಜಾಬಿ ಚಿತ್ರದಲ್ಲಿ ಸೋನಂ, ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾಳೆ. ಪಂಜಾಬಿ ಚಿತ್ರದಲ್ಲಿ ನಾಯಕಿಯಾಗಿ ನಟಿಸಲು ಆಹ್ವಾನ ನೀಡಿದರೆ ಒಪ್ಪಿಕೊಳ್ಳುತ್ತೀರಾ? ಎಂಬ ಪ್ರಶ್ನೆ ಎದುರಾಯಿತು. ಭಾಷೆ ಬಾರದಿದ್ದರೂ ಅದನ್ನು ಅರ್ಥ ಮಾಡಿಕೊಳ್ಳಬಲ್ಲೆ. ಹೀಗಾಗಿ ನಟಿಸಲು ತೊಂದರೆಯಿಲ್ಲ. ಒಳ್ಳೆಯ ಅವಕಾಶ ಬಂದರೆ ನಟಿಸಬಾರದೇಕೆ? ಎಂಬ ಉತ್ತರ ಆಕೆಯದು. ಪಂಜಾಬಿಯಲ್ಲದೆ ಭಾರತದ ಅಥವಾ ವಿದೇಶದ ಯಾವ ಭಾಷೆಯ ಚಿತ್ರವಾದರೂ ನಟಿಸಬಲ್ಲೆ ಎಂದಿದ್ದಾಳೆ ಸೋನಂ. ಅದಕ್ಕೆ ಹಾಲಿವುಡ್ ಮಾತ್ರವೇ ಆಗಬೇಕೆಂದಿಲ್ಲ. ರಷ್ಯನ್, ಫ್ರೆಂಚ್ ಅಥವಾ ಬೇರೆ ಯಾವ ಭಾಷೆಯಾದರೂ ತೊಂದರೆಯಿಲ್ಲ ಎಂಬ ಉದಾರತೆ ಆಕೆಯದು. ಆಕೆಯ ತಂದೆ ಅನಿಲ್ ಕಪೂರ್ ಕನ್ನಡದ 'ಪಲ್ಲವಿ ಅನುಪಲ್ಲವಿ' ಚಿತ್ರದ ಮೂಲಕ ಬೆಳ್ಳಿಪರದೆ ಮೇಲೆ ಮೊದಲ ಬಾರಿ ಕಾಣಿಸಿಕೊಂಡಿದ್ದು. ಹೀಗಾಗಿ ಆಕೆಗೆ ಕನ್ನಡದಲ್ಲಿ ನಟಿಸುವ ಆಸಕ್ತಿಯಿದೆ. ಆಕೆಯನ್ನು ಕನ್ನಡ ಚಿತ್ರರಂಗಕ್ಕೆ ಕರೆ ತರುತ್ತೇನೆ ಎಂದು ಇಲ್ಲಿನ ನಿರ್ದೇಶಕರೊಬ್ಬರು ಹಿಂದೆ ಹೇಳಿಕೊಂಡಿದ್ದರು. ಕಥೆ ಚೆನ್ನಾಗಿರಬೇಕು ಎಂಬ ಷರತ್ತಿನ ಕಾರಣ ಅದು ಇದುವರೆಗೂ ಸಾಧ್ಯವಾಗದೇ ಇರಬಹುದು!

# 'ಪದ್ಮಾವತಿ'ಗೆ ಹನ್ನೆರಡೂವರೆ ಕೋಟಿ!

ಸದ್ಯಕ್ಕೆ ಬಾಲಿವುಡ್‌ನ ರಾಣಿ ಎಂದರೆ ದೀಪಿಕಾ ಪಡುಕೋಣೆ ಎಂಬ ಮಾತುಗಳು ಬಿಟೌನ್‌ನಲ್ಲಿ ಕೇಳಿಬರುತ್ತಿದೆ. ಒಂದು ಕಾಲದಲ್ಲಿ ಬಾಲಿವುಡ್ ಆಳುತ್ತಿದ್ದ ಕರೀನಾ ಕಪೂರ್ ಈಗ ತಣ್ಣಗಾಗಿದ್ದಾಳೆ. ಪ್ರಿಯಾಂಕಾ ಚೋಪ್ರಾ ಹೆಜ್ಜೆ ಗುರುತು ಹಾಲಿವುಡ್ ಅಂಗಳದಲ್ಲಿಯೇ ಹೆಚ್ಚಾಗಿ ಕಾಣಿಸುತ್ತಿದೆ. ಕತ್ರೀನಾ ಕೈಫ್ ಆರಕ್ಕೇರುತ್ತಿಲ್ಲ. ಹೀಗಾಗಿ ಈಗ ದೀಪಿಕಾಳಿಗೆ ಸವಾಲೊಡ್ಡುವ ಏಕೈಕ ನಟಿ ಎಂದರೆ ಕಂಗನಾ ರನೋಟ್ ಮಾತ್ರ. ಇಬ್ಬರ ನಡುವಣ ಹೋಲಿಕೆಯಲ್ಲಿ ದೀಪಿಕಾಳ ಗ್ರಾಫ್ ಮಟ್ಟವೇ ಹೆಚ್ಚು. ಮೊನ್ನೆ ಮೊನ್ನೆ 'ಪದ್ಮಾವತಿ' ಚಿತ್ರಕ್ಕಾಗಿ ದೀಪಿಕಾ ತೆಗೆದುಕೊಂಡ ಸಂಭಾವನೆ ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವಂತಿದೆ. ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಪದ್ಮಾವತಿ' ಚಿತ್ರಕ್ಕೆ ದೀಪಿಕಾ ತೆಗೆದುಕೊಂಡಿರುವ ಸಂಭಾವನೆ ಬರೋಬ್ಬರಿ ₹12.65 ಕೋಟಿಯಂತೆ. ಹೆಚ್ಚೇನಿಲ್ಲ, ಎರಡು ವರ್ಷಗಳ ಹಿಂದಷ್ಟೇ 'ರಾಮ್–ಲೀಲಾ' ಚಿತ್ರಕ್ಕೆ ದೀಪಿಕಾ ₹ 1 ಕೋಟಿ ಸಂಭಾವನೆ ತೆಗೆದುಕೊಂಡಿದ್ದಳು. 'ಬಾಜಿರಾವ್ ಮಸ್ತಾನಿ' ಚಿತ್ರದ ವೇಳೆಗೆ ಅದು ₹7 ಕೋಟಿಗೆ ಏರಿತು. ಅಂದ ಹಾಗೆ, ಇದುವರೆಗೂ ಬಾಲಿವುಡ್‌ನಲ್ಲಿ ಯಾವ ನಟಿಯ ಸಂಭಾವನೆಯೂ ₹10 ಕೋಟಿ ದಾಟಿರಲಿಲ್ಲ. ಈಗ ಅತಿ ಬೇಡಿಕೆಯಲ್ಲಿರುವ ದೀಪಿಕಾ ತನ್ನದೇ ಹಾದಿ ನಿರ್ಮಿಸಿದ್ದಾಳೆ. ಬನ್ಸಾಲಿ ತಂಡದಿಂದ ಆಕೆ ಪಡೆಯುತ್ತಿರುವ ಸಂಭಾವನೆ ₹11 ಕೋಟಿ. ತೆರಿಗೆ ಮೊತ್ತವೂ ಸೇರಿ ಅದರ ಮೊತ್ತ ₹12.65 ಕೋಟಿ ಆಗಿದೆಯಂತೆ.

ಇನ್ನೂ ಒಂದು ಮಾತು ದೀಪಿಕಾ ಕುರಿತು ಬಿಟೌನ್‌ನಲ್ಲಿ ಹರಿದಾಡುತ್ತಿದೆ. ಅದು 'ಪದ್ಮಾವತಿ' ಚಿತ್ರದ ನಟನ ಬಗ್ಗೆ. ಈ 'ಪದ್ಮಾವತಿ'ಗೆ ಪತಿಯೊಬ್ಬ ಬೇಕು. ಆತ ಯಾರೆಂದು ಇನ್ನೂ ನಿರ್ಧಾರವಾಗಿಲ್ಲ. ಮೂಲಗಳ ಪ್ರಕಾರ, ತನ್ನ ಗಂಡನ ಪಾತ್ರದ ನಟನನ್ನು ದೀಪಿಕಾಳೇ ಆಯ್ಕೆ ಮಾಡಲಿದ್ದಾಳಂತೆ. ಅದು ರಣವೀರ್ ಸಿಂಗ್‌ನೇ ಆಗಿರುತ್ತಾನೆ ಎಂದೂ ಹೇಳಲಾಗುತ್ತಿದೆ. ಬಾಲಿವುಡ್‌ನಲ್ಲಿ ಈಗ ಆಕೆಯದೇ ಕಾಲ. ಸದ್ಯಕ್ಕೆ ದೀಪಿಕಾ ಬಾಲಿವುಡ್ ಎಂಬ ಊರಿನ ಏಕೈಕ 'ಪದ್ಮಾವತಿ'!

